ಮುಕ್ತಿ ಸಾಧ್ಯವಿಲ್ಲ ಎಂದು ಜನ ಹೇಳುತ್ತಿದ್ದರು. ಅಲ್ಲದೆ, ಗುರುವನ್ನು ದೇವರಂತೆ ಕಾಣಬೇಕೆಂದು ಹೇಳುತ್ತಿದ್ದರು. ಈ ಆಲೋಚನೆಯೇ ನನಗೆ ಜುಗುಪ್ಸೆ ತರುತ್ತಿತ್ತು, ಏಕೆಂದರೆ ಮನುಷ್ಯನನ್ನು ದೇವರೆಂದು ಭಾವಿಸುವುದಕ್ಕಿಂತ ದೋಷಪೂರಿತವಾದುದು ಮತ್ತಾವುದೂ ಇಲ್ಲ. "ಮಾನವ ಗುರು ಇಲ್ಲದೆ ನಾನೊಬ್ಬನೇ ಮುಂದೆ ಸಾಗಬೇಕು. ನಾನು ತಾರಕನಾಥನಿಗೆ ಪ್ರಾರ್ಥಿಸುತ್ತೇನೆ. ಅವನೇ ನನ್ನ ಗುರುವಾಗಲಿ" ಎಂದುಕೊಂಡೆ. ಯಾವ ಮಾನವನ ಮಧ್ಯಸ್ಥಿಕೆ ಇಲ್ಲದೆ ದೇವರೇ ದರ್ಶನ ಕೊಟ್ಟು, ಕೆಲವರಿಗೆ ಆಧ್ಯಾತ್ಮಿಕ ಉಪದೇಶಗಳನ್ನು ನೀಡಿರುವುದನ್ನು ಕೇಳಿದ್ದೆ. ಅವನು ಅಂತಹ ಕೃಪೆಯನ್ನು ನನ್ನ ಮೇಲೆ ತೋರುವುದಾದರೆ ನಾನು ಉಳಿದುಕೊಳ್ಳುವೆ. ಇಲ್ಲವಾದರೆ ನಾನು ನಿಸ್ಸಹಾಯಕನಾಗಿಬಿಡುತ್ತೇನೆ. ಆದರೆ ನಾನು ತಾರಕನಾಥನನ್ನು ಕಂಡಿರಲಿಲ್ಲ. ಈಗ ನಾನೇನು ಮಾಡಬೇಕು? ಬೆಳಗಿನ ಹೊತ್ತು ನಾನು ಅವನ ಹೆಸರನ್ನು ಜಪಿಸುವೆನು. ಏನಾಗುವುದೋ ನೋಡೋಣ.

ಒಬ್ಬ ವೈಷ್ಣವ ವರ್ಣಚಿತ್ರಕಾರನ ಪರಿಚಯವಾಯಿತು. ಆತ ಹೇಳಿದ, "ನಾನು ದೇವರಿಗೆ ಪ್ರತಿ ನಿತ್ಯ ಆಹಾರ ನಿವೇದಿಸುತ್ತೇನೆ. ಅವನು ಅದನ್ನು ಸ್ವೀಕರಿಸುವನೆಂದು ಕೆಲವು ಕುರುಹುಗಳಿಂದ ನನಗೆ ದೃಢವಾಗಿದೆ. ಗುರುವಿನಿಂದ ಉಪದೇಶ ದೊರೆತ ಹೊರತು ಅವನು ನೈವೇದ್ಯವನ್ನು ಸ್ವೀಕರಿಸುವುದಿಲ್ಲ." ಅದು ನಿಜವೊ ಅಲ್ಲವೊ ನನಗೆ ತಿಳಿಯಲಿಲ್ಲ. ಅದರೆ ನನ್ನ ಮನಸ್ಸಂತೂ ಅಶಾಂತವಾಯಿತು. ನಾನು ಅವನನ್ನು ಬೀಳ್ಕೊಟ್ಟು, ಮನೆಗೆ ಹಿಂತಿರುಗಿ ಎಲ್ಲ ಬಾಗಿಲುಗಳನ್ನೂ ಹಾಕಿಕೊಂಡು ಅಳಲು ಪ್ರಾರಂಭಿಸಿದೆ.

ಮೂರು ದಿನಗಳ ನಂತರ ನನ್ನ ಒಬ್ಬ ಸ್ನೇಹಿತರ ಮನೆಯ ಹೊರಾಂಗಣದ ಮೇಲ್ಭಾಗದಲ್ಲಿ ಕುಳಿತಿದ್ದಾಗ, ಶ್ರೀರಾಮಕೃಷ್ಣರು, ನಾರಾಯಣ ಮತ್ತು ಇತರ ಕೆಲವು ಭಕ್ತರೊಂದಿಗೆ ನಮ್ಮ ಕಡೆಗೇ ಬರುತ್ತಿರುವುದನ್ನು ಕಂಡೆ. ನಾನು ಅವರ ಕಡೆ ನೋಡುತ್ತಿದ್ದಂತೆ ಅವರು ನನಗೆ ನಮಸ್ಕರಿಸಿದರು. ನಾನೂ ಅವರಿಗೆ ನಮಸ್ಕರಿಸಿದೆ. ಅನಂತರ ಅವರು ಮುಂದೆ ಹೋದರು. ಕಾಣದ ತಂತು ನನ್ನ ಹೃದಯವನ್ನು ಅವರೆಡೆಗೆ ಎಳೆದಂತಾಯಿತು. ಅದಕ್ಕೆ ನಾನು ಯಾವ ಕಾರಣವನ್ನೂ ಕೊಡಲಾರೆ. ಅವರು ಸ್ವಲ್ಪ ದೂರ ಹೋಗುವುದರಲ್ಲಿ ಅವರನ್ನು ನಾನು ಹಿಂಬಾಲಿಸಬೇಕೆಂಬ ಆಸೆ ನನ್ನಲ್ಲಿ ಪ್ರಬಲವಾಯಿತು. ಇನ್ನು ತೆಪ್ಪಗಿರಲು ಸಾಧ್ಯವಾಗಲಿಲ್ಲ. ಏಕೆಂದರೆ ನಾನು ಅನುಭವಿಸಿದ ಆಕರ್ಷಣೆ ಈ ಮರ್ತ್ಯಲೋಕದ್ದಾಗಿರಲಿಲ್ಲ. ಹಿಂದೆ ನಾನೆಂದೂ ಅನುಭವಿಸದ, ವಿವರಿಸಲಾಗದ ವಿಭಿನ್ನ ಆಕರ್ಷಣೆ ಅದಾಗಿತ್ತು. ಆಗ ಯಾರೋ ಬಂದು, "ಶ್ರೀರಾಮಕೃಷ್ಣರು ನಿಮ್ಮನ್ನು ಕರೆಯುತ್ತಿದ್ದಾರೆ" ಎಂದು ಹೇಳಿದರು. ಅವರು ಯಾರೆಂದು ಈಗ ನನಗೆ ನೆನಪಿಲ್ಲ. ನಾನು ಹೋದೆ.

ಶ್ರೀರಾಮಕೃಷ್ಣರು ಬಲರಾಮನ ಮನೆಗೆ ಹೋಗಿದ್ದರು. ನಾನು ಅಲ್ಲಿಗೆ ಹೋದೆ. ಬಲರಾಮ ಮಂಚದ ಮೇಲೆ ಮಲಗಿದ್ದ, ಖಾಯಿಲೆಯಾಗಿದ್ದಂತೆ ಕಂಡ. ಶ್ರೀರಾಮಕೃಷ್ಣರನ್ನು ಕಂಡೊಡನೆ ಎದ್ದು ಅತ್ಯಂತ ಗೌರವದಿಂದ ಸಾಷ್ಟಾಂಗ ನಮಸ್ಕಾರ ಮಾಡಿದ. ಬಲರಾಮನೊಂದಿಗೆ ಒಂದೆರಡು ಮಾತನಾಡಿದ ಬಳಿಕ ಶ್ರೀರಾಮಕೃಷ್ಣರು ಇದ್ದಕ್ಕಿದ್ದಂತೆ, "ನಾನು ಸರಿಯಾಗಿದ್ದೇನೆ, ನಾನು ಸರಿಯಾಗಿದ್ದೇನೆ" ಎಂದು ಉದ್ಗರಿಸಿದರು. ಹಾಗೆ ಹೇಳುತ್ತ ಅವರು ಒಂದು ವಿಧವಾದ ಭಾವಸ್ಥಿತಿಗೆ ಹೋದರು. ಅದು ನನಗೆ ವಿಚಿತ್ರವಾಗಿ ಕಂಡಿತು. ಅನಂತರ ಅವರು, "ಅಲ್ಲ, ಅಲ್ಲ, ಇದು ತೋರಿಕೆಯಲ್ಲ, ಇದು ತೋರಿಕೆಯಲ್ಲ" ಎಂದರು. ಈ ಸ್ಥಿತಿಯಲ್ಲಿ ಅವರು ಸ್ವಲ್ಪ ಕಾಲ ಇದ್ದರು. ನಂತರ ಎಂದಿನಂತಾದರು. ನಾನು ಅವರನ್ನು ಕೇಳಿದೆ, "ಗುರು ಎಂದರೆ ಯಾರು?" ಎಂದು. ಅವರು ಹೇಳಿದರು, "ಗುರು ಎಂದರೆ ಯಾರು ಗೊತ್ತೆ? ಅವನು ಜೊತೆಗೂಡಿಸುವ ಮಧ್ಯಸ್ಥಿಕೆದಾರ. ಮಧ್ಯಸ್ಥಿಕೆದಾರ ಮದುವೆ ಆಗಬೇಕಾದ ಹೆಣ್ಣು ಮತ್ತು ಗಂಡಿಗೆ ಜೋಡಿ ಮಾಡಿಸುತ್ತಾನೆ. ಅದರಂತೆ ಗುರುವಾದವನು ಜೀವಿಯನ್ನೂ ಮತ್ತು ಅವನ ಪ್ರಿಯನಾದ ಪರಮಾತ್ಮನನ್ನೂ ಜೊತೆಗೂಡಿಸಲು ಸಿದ್ಧತೆ ನಡೆಸುತ್ತಾನೆ." ದಿಟವಾಗಿ ಅವರು 'ಜೊತೆಗೂಡಿಸುವವನು' ಎಂಬ ಶಬ್ದವನ್ನು ಬಳಸಲಿಲ್ಲ, ಅದಕ್ಕಿಂತ ಹೆಚ್ಚು ಅರ್ಥಗರ್ಭಿತವಾದ ಒಂದು ಗ್ರಾಮ್ಯ ಪದವನ್ನು ಬಳಸಿದರು. ನಂತರ ಅವರು ಹೇಳಿದರು, "ನೀನು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ. ನಿನ್ನ ಗುರುವಿನ ಆಯ್ಕೆ ಈಗಾಗಲೇ ಆಗಿಬಿಟ್ಟಿದೆ." ನಾನು ಕೇಳಿದೆ, "ಮಂತ್ರ ಎಂದರೇನು?" "ದೇವರ ಹೆಸರು" ಎಂದು ಅವರು ಉತ್ತರವಿತ್ತರು. ಅದಕ್ಕೆ ಉದಾಹರಣೆಯಾಗಿ ಒಂದು ಕಥೆಯನ್ನು ಹೇಳಿದರು: "ಪ್ರತಿದಿನ ಮುಂಜಾನೆ ರಮಾನಂದರು ಗಂಗೆಗೆ ಸ್ನಾನಕ್ಕೆ ಹೋಗುತ್ತಿದ್ದರು. ಕಬೀರ ಎಂಬ ನೇಯ್ಗೆಯವನು ನೀರಿಗೆ ಹೋಗುವ ಮೆಟ್ಟಲಿನ ಮೇಲೆ ಮಲಗಿದ್ದ. ರಮಾನಂದರ ಪಾದ ಆಕಸ್ಮಿಕವಾಗಿ ಕಬೀರನ ಶರೀರಕ್ಕೆ ತಾಕಿತು. ಎಲ್ಲ ಜೀವಿಗಳಲ್ಲಿಯೂ ಭಗವಂತನನ್ನು ಕಾಣುತ್ತಿದ್ದ ಅವರು, 'ರಾಮ' ಎಂದು ಉದ್ಗಾರ ಮಾಡಿದರು. ಇದನ್ನು ರಮಾನಂದರಂಥ ಮಹಾತ್ಮರ ಬಾಯಿಂದ ಕೇಳಿದ ಕಬೀರ, ಅದನ್ನೇ ತನ್ನ ಮಂತ್ರವನ್ನಾಗಿ ಸ್ವೀಕರಿಸಿ ಜಪಿಸುತ್ತ, ರಾಮನನ್ನು ಪ್ರತ್ಯಕ್ಷ ಮಾಡಿಕೊಂಡನು."

(ಮುಂದುವರಿಯುವುದು)